ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಹೌದು

ಆ) ಯಾವುದೂ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಇ) ಅಂದಾಜು ಮೂಡಿಲ್ಲ.

ರಾಜ್ಯದಲ್ಲಿ ಭೂ ಮಾಪನ ಕಾರ್ಯವನ್ನು ವ್ಯಾಪಕವಾಗಿ ನಡೆಸುವುದು

೯೯೩. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದಲ್ಲಿ ಭೂ ಮಾಪನ (ಲ್ಯಾಂಡ್ ಸರ್ವೆ) ವ್ಯಾಪಕವಾಗಿ ನಡೆದು ಎಷ್ಟು ವರ್ಷ ಗಳಾದವು;

ಆ) ರಾಜ್ಯದಲ್ಲಿ ಸರ್ವೆ ದಾಖಲೆಗಳಲ್ಲಿ ಏಕರೂಪತೆ ಹಾಗೂ ಆಧುನಿಕತೆ ತರಲು ಕಂದಾಯ ಇಲಾಖೆ ಕೈಗೊಂಡ ಕಾರ್ಯಕ್ರಮವೇನು;

ಇ) ರಾಜ್ಯದಲ್ಲಿ ಪ್ರತಿ ಗ್ರಾಮಕ್ಕೂ ಭೂಪಟ (ಮ್ಯಾಪ್) ಹೊಂದಲು ಸರ್ವೆ ಇಲಾಖೆ ಕ್ರಮ ಕೈಗೊಳ್ಳುವುದೇ;

ಈ) ಜಮೀನು ಅಳತೆ ಮಾಡಲು ಗ್ರಾಮೀಣ ಯುವಕರಿಗೆ ತರಬೇತಿ ನೀಡಲು ಸರ್ವೆ ಇಲಾಖೆ ಕ್ರಮ ಕೈಗೊಳ್ಳುವುದೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಈಗ್ಗೆ ಸುಮಾರು ೧೦೦ ವರ್ಷಗಳ ಮೇಲ್ಪಟ್ಟು ಆಗಿರುತ್ತದೆ.

ಆ) ೧. ಗ್ರಾಮ ನಕಾಶೆಗಳನ್ನು ಹಾಗೂ ನಗರ ಮಾಪನ ನಕಾಶೆಗಳನ್ನು ತ್ವರಿತವಾಗಿ ಮತ್ತು ಕರಾರುವಾಕ್ಕಾಗಿ ಮುದ್ರಿಸಲು ಹೊಸ ಮುದ್ರಣ ಯಂತ್ರವನ್ನು ಹಿಂದೂಸ್ತಾನ್ ಮೆಷಿನ್ಸ್ ಟೂಲ್ಸ್ ಕಂಪನಿಯವರಿಂದ ಖರೀದಿಸಿದೆ.

೨. ಮೈಸೂರು ಸರ್ವೆ ಸೆಟಲ್‌ಮೆಂಟ್ ತರಬೇತಿ ಕೇಂದ್ರವನ್ನು ಬಲವರ್ಧಿಸಿ ಭೂಮಾಪಕರಿಗೆ ಆಧುನೀಕೃತ ಉಪಕರಣಗಳಿಂದ ಕರಾರುವಾಕ್ಕಾಗಿ ಅಳತೆ ಮಾಡುವ ತರಬೇತಿ ಕೊಡಲು ಪ್ರೋತ್ಸಾಹಿಸಿದೆ.

೩) ಭೂಮಾಪನ ಇಲಾಖೆಯ ಅಧಿಕಾರಿಗಳು ನೌಕರರ ತರಬೇತಿಗಾಗಿ ಹೈದರಾಬಾದಿನಲ್ಲಿ ಇರುವ ಭಾರತೀಯ ಸರ್ವೇಕ್ಷಣಾ ತರಬೇತಿ ಕೇಂದ್ರಕ್ಕೆ ನಿಯೋಜಿಸಲಾಗುತ್ತಿದೆ.

ಇ) ಹೌದು.

ಈ) ಸದ್ಯದ ಪರಿಸ್ಥಿತಿಯಲ್ಲಿ ಇಲ್ಲ.

ಪ್ರಧಾನಿಯವರ ಕರ್ನಾಟಕ ಪ್ರವಾಸದ ಖರ್ಚಿನ ವಿವರಗಳು

೧೦೩೭. ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ.—

೧. ದಿನಾಂಕ ೧೧–೫–೧೯೮೦ರಂದು ಮಾನ್ಯ ಪ್ರಧಾನ ಮಂತ್ರಿಯವರು ಕರ್ನಾಟಕ ಪ್ರವಾಸ ಮಾಡಿದ ಸಂದರ್ಭದಲ್ಲಿ ರಕ್ಷಣೆ ಹಾಗೂ ವಿವಿಧ ಬಾಬುಗಳಿಗೆ ಮಾಡಿದ ಖರ್ಚಿನ ವಿವರಗಳನ್ನು ನೀಡುವುದು

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

(೧) ರಕ್ಷಣೆಗಾಗಿ ರೂ. ೪,೬೮,೬೯೪—೬೦

(೨) ವಿವಿಧ ಬಾಬ್ತು ರೂ. ೧,೧೩,೬೩೪—೭೫